ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Jnana jyothi Central College Campus, Dr. B.R. AmbedkarVeedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ: ಬೆಂ.ನ.ವಿ/ಎ.ಸಿ.ಎ/ಸಂಯೋಜನೆ/ /2024–25

ದಿನಾಂಕ:28.10.2024

**ಅಧಿಸೂಚನೆ**

ವಿಷಯ: 2025-26ನೇ ಸಾಲಿಗೆ ಸಂಯೋಜನೆಗಾಗಿ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 212 ಯುಎನ್ಇ 2024. ದಿನಾಂಕ: 04.10.2024
2. ಕುಲಪತಿಗಳ ಅನುಮೋದನೆ ದಿನಾಂಕ:28.10.2024

*****

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ, 2025–26ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ, ಅಂದರೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015ರಲ್ಲಿ ನಿಗಧಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ ಬಸವನಗುಡಿ, ಬಿ.ಟಿ.ಎಮ್ ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟೆ, ಗಾಂಧಿನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರಂ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ, ಮತ್ತು ಯಲಹಂಕ, ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ ವಿವಿಧ ರೀತಿಯ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕಾಲೇಜುಗಳು ಮತ್ತು ಆಡಳಿತ ಮಂಡಳಿಗಳು ಸರ್ಕಾರದ UUCMS ತಂತ್ರಾಂಶದ ವೆಬ್ ಸೈಟ್ 'https://uucms.karnataka.gov.in/' ಆನ್ ಲೈನ್ ಮುಖಾಂತರ ಮಾತ್ರವೇ ಸಂಯೋಜನಾ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಈ ಅರ್ಜಿಗಳನ್ನು ಸರ್ಕಾರದ ಪತ್ರ ಸಂಖ್ಯೆ ಇಡಿ 212 ಯುಎನ್ಇ 2024 ದಿನಾಂಕ:04.10.2024ರಂತೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 384 ಯುಎನ್ಇ 2020 ದಿನಾಂಕ:18.02.2022 ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021 ದಿನಾಂಕ:12.02.2021 ಹಾಗೂ 16.02.2021 ರಲ್ಲಿನ ಗುಣಮಟ್ಟ/ ಮಾನದಂಡಗಳನುಸಾರ ಮತ್ತು ಯುಜಿಸಿ (ವಿಶ್ವವಿದ್ಯಾಲಯದಿಂದ ಕಾಲೇಜಗಳ ಸಂಯೋಜನೆ) ನಿಯಮ 2009ರಂತೆ ಅನ್ವಯ ಪರಿಗಣಿಸಲಾಗುವುದು.

ಕಾಲೇಜುಗಳು /ಆಡಳಿತ ಮಂಡಳಿಗಳು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳನುಸಾರ/ ಮಾರ್ಗಸೂಚಿಯನುಸಾರ ಮೂಲಭೂತ ಹಾಗೂ ಇತರೆ ಸೌಕರ್ಯಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

1. **ಕಡ್ಡಾಯ ಮಾನದಂಡ:**

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್ಇ 2020 ದಿನಾಂಕ 18.02.2022ರಲ್ಲಿ ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆ ಹೆಚ್ಚಳ / ಸಂಯೋಜನೆ ಮುಂದುವರಿಕೆ / ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳ ಬಗ್ಗೆ ಸಂಸ್ಥೆ / ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಕೆಳಗಿನಂತೆ ಪರಿಷ್ಕರಿಸಲಾಗಿದೆ.

ಮಾನದಂಡಗಳು:

1. ಕಾಲೇಜು/ಸಂಸ್ಥೆಗಳು ಯಾವುದೇ ತಗಾದೇ ಇಲ್ಲದ ಯಾವುದೇ ಅಡೆತಡೆ ಇಲ್ಲದಂತೆ ಹೊಂದಿರತಕ್ಕಂತ ಜಮೀನಿನ ವಿಸ್ತೀರ್ಣ:

   ಅ: ಕಾಲೇಜುಗಳು ಮಹಾನಗರಗಳಲ್ಲಿ ಇದ್ದಲ್ಲಿ 0.5 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ.

   ಆ: ಕಾಲೇಜುಗಳು ಬಿಎಂಆರ್‌ಡಿಎ, ನಗರ ಕಾರ್ಪೊರೇಷನ್ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಇದ್ದಲ್ಲಿ 1 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ.

   ಇ: ಕಾಲೇಜುಗಳು ಪುರಸಭೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಇದ್ದಲ್ಲಿ 1.5 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ.

   ಈ: ಕಾಲೇಜುಗಳು ಯಾವುದೇ ಇತರ ಗ್ರಾಮೀಣ ಪ್ರದೇಶದಲ್ಲಿ ಇದ್ದಲ್ಲಿ 3 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ.

1. ಪರಂತು ಈ ಮಾನದಂಡವು ಯು.ಜಿ.ಸಿ ಅಧಿಸೂಚನೆ (ವಿಶ್ವವಿದ್ಯಾನಿಲಯದಿಂದ ಕಾಲೇಜುಗಳ ಸಂಯೋಜನೆ) ನಿಯಮ 2009 ರಂತೆ ಮತ್ತು ತಿದ್ದುಪಡಿ 2012ಕ್ಕಿಂತ ಹಿಂದೆ ಅಸ್ತಿತ್ವದಲ್ಲಿದ್ದ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ. ಆದರೆ ಅಂತಹ ಕಾಲೇಜುಗಳಲ್ಲಿ ಯಾವುದೇ ಅಸ್ತಿತ್ವದಲ್ಲಿರುವ ಕೋರ್ಸುಗಳು ಹಾಗೂ ವಿದ್ಯಾರ್ಥಿ ಪ್ರಮಾಣಗಳು ವ್ಯತ್ಯಾಸವಿರದಿದ್ದ ಪಕ್ಷದಲ್ಲಿ ಮಾತ್ರ ಈ ವಿನಾಯಿತಿ ಅನ್ವಯವಾಗುತ್ತದೆ.

2. ನ್ಯಾಯ ಸಮ್ಮತವಾದ ಅಸಾಧಾರಣ ಪ್ರಕರಣಗಳಲ್ಲಿ ನೋಂದಾಯಿತ ಸೊಸೈಟಿ/ಟ್ರಸ್ಟ್‌ಗಳು ಪ್ರಥಮ ವರ್ಷದ ಕಾರ್ಯಕ್ರಮ/ಕೋರ್ಸನ್ನು ಲಭ್ಯವಿರುವ ಕಟ್ಟಡದಲ್ಲಿ ಪ್ರಾರಂಭಿಸಲು ಅನುಮತಿಸಬಹುದು. ಆದರೆ ಕಂಡಿಕೆ 1ರಲ್ಲಿ ತಿಳಿಸಿರುವ ಪ್ರಕಾರ ಸಂಸ್ಥೆಯು ಶಾಶ್ವತ ಆಧಾರದ ಮೇಲೆ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಅಗತ್ಯವಾದ ಭೂಮಿಯನ್ನು ಹೊಂದಿರಬೇಕು.

3. ನೋಂದಾಯಿತ ಸಮಾಜ/ಟ್ರಸ್ಟ್‌ನಿಂದ ಕಾರ್ಯಗತಗೊಳಿಸಬೇಕಾದ ಬಾಂಡ್‌ನಲ್ಲಿ ಕಾಲೇಜು ಸಂಯೋಜಿತವಾದ ನಂತರ, ಅದನ್ನು ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೇ ಬೇರೆ ಸ್ಥಳಕ್ಕೆ ಸ್ಥಳಾಂತರವಾಗುವುದಿಲ್ಲ. ಅಥವಾ ಬೇರೆ ಸಮಾಜ, ಟ್ರಸ್ಟ್, ವ್ಯಕ್ತಿ ಅಥವಾ ಗುಂಪಿಗೆ ವರ್ಗಾಯಿಸಲಾಗುವುದಿಲ್ಲ ಎಂದು ನಮೂದಿಸಬೇಕು. ಹಾಗೇ ಕಾಲೇಜನ್ನು ಸ್ಥಳಾಂತರಕ್ಕೆ ಪ್ರಸ್ತಾಪಿಸಿದ ಹೊಸ ಸ್ಥಳದಲ್ಲಿ ಕಂಡಿಕೆ 1ರಲ್ಲಿ ನಮೂದಿಸುವಂತೆ ಕನಿಷ್ಠ ವಿಸ್ತೀರ್ಣದ ಜಮೀನನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲೆಗಳನ್ನು ಒದಗಿಸತಕ್ಕದ್ದು.

1. ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ ಕಾರ್ಪೋರೇಷನ್‌ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು.

ಅಥವಾ

ಸದರಿ ಜಮೀನಿನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿತವಾಗಿರುವ ಬಿ ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಗಿಂತ ಕಡಿಮೆ

ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ ಮುಂದುವರೆದು, ಕಾಯ್ದೆ /ಪರಿನಿಯಮಾವಳಿಯಲ್ಲಿ ಅಗತ್ಯಪಡಿಸಿರುವ ಇತರ ದಾಖಲೆಗಳನ್ನು ಸಲ್ಲಿಸತಕ್ಕದ್ದು.

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ 24.08.2020ರ ಅನ್ವಯ NBC (National Bulding Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಇತ್ತೀಚಿನ (latest) ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ ಇತ್ತೀಚಿನ (latest) Compliance Certificateಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಕಾಲೇಜುಗಳು ಸರ್ಕಾರವು ಆನ್- ಲೈನ್‌ತಂತ್ರಾಂಶದಲ್ಲಿ ನಮೂದಿಸಲಾಗಿರುವ ಎಲ್ಲಾ ವ್ಯಾಖ್ಯಾನಿತ ಮಾನದಂಡಗಳನ್ನು ಪೂರೈಸತಕ್ಕದ್ದು.

---

1. **ಸಂಯೋಜನಾ ನವೀಕರಣ / ತಾತ್ಕಾಲಿಕ ಸಂಯೋಜನಾ ಮುಂದುವರಿಕೆ (ಆರ್.ಟಿ.ಎ/ಇ.ಟಿ.ಎ):** ಈಗಾಗಲೇ ಅಸ್ತಿತ್ವದಲ್ಲಿರುವ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳಲ್ಲಿ ನಡೆಸಲಾಗುತ್ತಿರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಬಿ.ಸಿ.ಎ., ಬಿ.ಬಿ.ಎ., ಬಿ.ಹೆಚ್.ಎಂ., ಎಂ.ಬಿ.ಎ., ಎಂ.ಸಿ.ಎ., ಕೋರ್ಸುಗಳ ಸಂಯೋಜನಾ ನವೀಕರಣ/ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಅರ್ಜಿ ಸಲ್ಲಿಸುವ ಕಾಲೇಜುಗಳು ಎ.ಐ.ಸಿ.ಟಿ.ಇ ವತಿಯಿಂದ ಪೂರ್ವಾನುಮೋದನೆ, ಬಿ.ಎಸ್.ಎಲ್.ಪಿ /ಎಂ.ಎಸ್.ಎಲ್.ಪಿ., ಬಿ.ಎಸ್ಸಿ / ಎಂ.ಎಸ್ಸಿ (ಸ್ಪೀಚ್ ಅಂಡ್ ಹಿಯರಿಂಗ್) ನಡೆಸುತ್ತಿರುವ ಕಾಲೇಜುಗಳು ರೀಹೆಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದ ಪೂರ್ವಾನುಮೋದನೆಯನ್ನು ಬಿ.ಎ/ಬಿ.ಎಸ್ಸಿ- ಬಿ.ಇಡಿ., ಬಿ.ಪಿ.ಇಡಿ ಮತ್ತು ಎಂ.ಇಡಿ ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜುಗಳು ಎನ್.ಸಿ.ಟಿ.ಇ ಇಂದ ಪೂರ್ವಾನುಮೋದನೆಯನ್ನು ಹೊಂದಿರತಕ್ಕದ್ದು.

   ಸರ್ಕಾರದ ಆದೇಶ ಸಂಖ್ಯೆ ಇಡಿ 166 ಯುಎನ್ ಇ 2023, ಬೆಂಗಳೂರು, ದಿನಾಂಕ 08.05.2024 ರಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಅಧ್ಯಯನ 3 Major ವಿಷಯಗಳ Combination (Subject Combination) ಆಯ್ಕೆ ಮಾಡಿಕೊಳ್ಳಲು ನಿರ್ದೇಶಿಸಿರುವುದರಿಂದ 2021-22ನೇ ಸಾಲಿನಲ್ಲಿ ಕಾಲೇಜಿನ ಅಸ್ತಿತ್ವಗಳಲ್ಲಿದ್ದ 3 ವಿಷಯವನ್ನು Combination ಅನುಸಾರ ಸಂಯೋಜನಾ ನವೀಕರಣ ಅರ್ಜಿಯನ್ನು ಸಲ್ಲಿಸತಕ್ಕದ್ದು.

   ನ್ಯಾಕ್ ಮೌಲ್ಯಾಂಕನ: ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 76 ಯುಬಿವಿ 2011 ಬೆಂಗಳೂರು, ದಿನಾಂಕ 17.05.2011 ರಲ್ಲಿ ತಿಳಿಸಿರುವಂತೆ, ಕಾಲೇಜು ಅಸ್ತಿತ್ವಕ್ಕೆ ಬಂದು ಐದು ವರ್ಷ ಪೂರೈಸಿರುವಂತಹ ಕಾಲೇಜುಗಳ ನ್ಯಾಕ್ ಸಂಸ್ಥೆಯ ಮಾನದಂಡವನ್ನು ಪೂರೈಸಿ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯ ಮೌಲ್ಯಾಂಕನವನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಕಾಲೇಜಿನ ಪ್ರಾಂಶುಪಾಲರುಗಳು ಕಾಲೇಜಿನ ಅಭಿವೃದ್ಧಿಗೆ ಸರ್ಕಾರವು ಹೊರಡಿಸುವ ನಿರ್ದೇಶನಗಳಿಗೆ ಬದ್ಧರಾಗಿರತಕ್ಕದ್ದು.

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್ಇ 2020 ದಿನಾಂಕ 24.08.2020ರ ಅನ್ವಯ NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ Compliance Certificateಗಳನ್ನು ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ. 2024-25ನೇ ಸಾಲಿಗೆ ಅಂತಹ ಕಾಲೇಜುಗಳ ಸಂಯೋಜನಾ ನವೀಕರಣವು ಈ ಪ್ರಮಾಣ ಪತ್ರಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

2. **ವಿದ್ಯಾರ್ಥಿ ಪ್ರಮಾಣ ಹೆಚ್ಚಳ ( ಇ.ಟಿ.ಎ- ಐ.ಐ)**

ಅಧಿಸೂಚನೆ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಪೂರೈಸಿರುವ ಕಾಲೇಜುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳಲ್ಲಿ ನಡೆಸಲಾಗುತ್ತಿರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಬಿ.ಸಿ.ಎ., ಬಿ.ಬಿ.ಎ., ಬಿ.ಹೆಚ್.ಎಂ., ಎಂ.ಬಿ.ಎ., ಎಂ.ಸಿ.ಎ ಕೋರ್ಸುಗಳ ಸಂಯೋಜನಾ ನವೀಕರಣ/ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಅರ್ಜಿ ಸಲ್ಲಿಸುವ ಕಾಲೇಜುಗಳು ಎ.ಐ.ಸಿ.ಟಿ.ಇ ವತಿಯಿಂದ ಪೂರ್ವಾನುಮೋದನೆ, ಬಿ.ಎಸ್.ಎಲ್.ಪಿ/ಎಂ.ಎಸ್.ಎಲ್.ಪಿ., ಬಿ.ಎಸ್ಸಿ/ಎಂ.ಎಸ್ಸಿ (ಸ್ಪೀಚ್ ಅಂಡ್ ಹಿಯರಿಂಗ್) ನಡೆಸುತ್ತಿರುವ ಕಾಲೇಜುಗಳು ರೀಹೆಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದ ಪೂರ್ವಾನುಮೋದನೆಯನ್ನು ಬಿ.ಎ/ಬಿ.ಎಸ್ಸಿ- ಬಿ.ಇಡಿ., ಬಿ.ಪಿ.ಇಪಿ ಮತ್ತು ಎಂ.ಇಡಿ ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜಗಳು ಎನ್.ಸಿ.ಟಿ.ಇ ಇಂದ ಪೂರ್ವಾನುಮೋದನೆಯನ್ನು ಹೊಂದಿರತಕ್ಕದ್ದು.

3. **ಹೆಚ್ಚುವರಿ ಕೋರ್ಸು/ ಹೊಸ ಕೋರ್ಸು ಸಂಯೋಜನೆ (ಐ.ಎಸ್)**

ಅಧಿಸೂಚನೆ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಪೂರೈಸಿರುವ ಕಾಲೇಜುಗಳು ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ಕಾಲೇಜುಗಳು ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಬಹುದಾಗಿದೆ. ಕಾಲೇಜಗಳು ಅನುಮೋದಿತ ಕೋರ್ಸು/ವಿಷಯಗಳನ್ನು ಮಾತ್ರ ನಮೂದಿಸತಕ್ಕದ್ದು. ಅನುಮೋದಿತ ಕೋರ್ಸು/ವಿಷಯಗಳನ್ನು ವಿಶ್ವವಿದ್ಯಾನಿಲಯದ ವೆಬ್-ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

**ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ:** 2 ವರ್ಷಗಳ ನಿರಂತರ ಸಂಯೋಜನೆಯನ್ನು ಪೂರೈಸಿ, ಉತ್ತಮ ಮೂಲಭೂತ ಸೌಕರ್ಯಗಳನ್ನು ಹಾಗೂ ಅರ್ಹ ಶಿಕ್ಷಕರನ್ನು ಹೊಂದಿರುವಂತಹ ಕಾಲೇಜುಗಳು ಸ್ನಾತಕೋತ್ತರ ಕೋರ್ಸುಗಳ ಹೊಸ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರಿ ಕಾಲೇಜುಗಳು ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆಗೆ ಅರ್ಜಿ ಸಲ್ಲಿಸಲು ಕಾಲೇಜು ಶಿಕ್ಷಣ ಇಲಾಖೆಯ ಅನುಮತಿಯನ್ನು ಪಡೆಯತಕ್ಕದ್ದು.

4. **ಹೊಸ ಕಾಲೇಜು ಪ್ರಾರಂಭಿಸಲು ಸಂಯೋಜನೆ (ಎನ್.ಸಿ):**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಘ/ಟ್ರಸ್ಟ್ ನೋಂದಣಿ ಕಾಯ್ದೆಯನ್ವಯ ನೋಂದಾಯಿತ ಆಡಳಿತ ಮಂಡಳಿ/ಸೊಸೈಟಿ/ಟ್ರಸ್ಟ್‌ಗಳು, ಅಧಿಸೂಚನೆ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಖಚಿತಪಡಿಸಿಕೊಂಡು ಹೊಸ ಕಾಲೇಜನ್ನು ಪ್ರಾರಂಭಿಸಲು (ಅನುಮೋದಿತ ಸ್ನಾತಕ ಪದವಿ ಕೋರ್ಸು/ವಿಷಯಗಳಿಗೆ ಮಾತ್ರ) ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೊಸ ಕಾಲೇಜುಗಳು ಸ್ನಾತಕೋತ್ತರ ಪದವಿ ಕೋರ್ಸುಗಳ ಸಂಯೋಜನೆಗೆ ಅರ್ಜಿ ಸಲ್ಲಿಸತಕ್ಕದ್ದಲ್ಲ( ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳನ್ನು ಹೊರತುಪಡಿಸಿ)

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ 24.08.2020ರ ಅನ್ವಯ NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ Compliance Certificateಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

ಮುಂದುವರೆದು ನೋಂದಾಯಿತ ಟ್ರಸ್ಟ್, ಡೀಡ್, ಕ್ರಯ ಪತ್ರ, ಪರಿಶಿಷ್ಟ/ಜಾತಿ ಪಂಗಡ ಪ್ರಮಾಣ ಪತ್ರ (ಸಮಾಜ ಕಲ್ಯಾಣ ಇಲಾಖೆಯಿಂದ) ವಿಧಾನ ಸಭಾ ಕ್ಷೇತ್ರದ ಪ್ರಮಾಣ ಪತ್ರ( ವಿಧಾನ ಸಭಾ ಕ್ಷೇತ್ರಗಳ ಗಡಿಯಲ್ಲಿರುವವರಿಗೆ) ಗಳನ್ನು ಆನ್-ಲೈನ್‌ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿದೆ. ಈ ದಾಖಲೆಗಳು ಇಲ್ಲದೇ ಆನ್- ಲೈನ್ ಮೂಲಕ ಅರ್ಜಿಗಾಗಿ ಮನವಿಗಳನ್ನು ಪರಿಷ್ಕರಿಸಲಾಗುವುದಿಲ್ಲ. ದಾಖಲೆಗಳ ಪ್ರತಿಗಳನ್ನು ಪರಿಶೀಲಸಿದ ನಂತರ ಯುಯುಸಿಎಂಎಸ್ ತಂತ್ರಾಂಶ ಕಛೇರಿಗೆ ರವಾನಿಸಲಾಗುವುದು. ಸಂಸ್ಥೆಯವರು, ಯುಯುಸಿಎಂಎಸ್ ತಂತ್ರಾಂಶ ಕಛೇರಿಯಿಂದ ನೀಡಲ್ಪಡುವ ಲಾಗಿನ್ ಮುಖಾಂತರವೇ ಹೊಸ ಕಾಲೇಜು ಸಂಯೋಜನಾ ಅರ್ಜಿಯನ್ನು ಸಲ್ಲಿಸತಕ್ಕದ್ದು.

**ಸೂಚನೆ:**

1. ಎನ್.ಸಿ.ಟಿ.ಇ ಸೂಚನೆಯಂತೆ ಆಡಳಿತ ಮಂಡಳಿ/ಸೊಸೈಟಿ/ಟ್ರಸ್ಟ್‌ಗಳು ಹೊಸ ಬಿ.ಇಡಿ/ಬಿ.ಪಿ.ಇಡಿ. ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸತಕ್ಕದ್ದಲ್ಲ.
2. ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ಮಾತ್ರ ಸರ್ಟಿಫಿಕೇಟ್ ಕೋರ್ಸು, ಡಿಪ್ಲೋಮಾ, ಸ್ನಾತಕೋತ್ತರ ಡಿಪ್ಲೋಮಾ ಅನುಮೋದಿತ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.
3. ಬಿ.ಬಿ.ಎ., ಬಿ.ಸಿ.ಎ ಹಾಗೂ ಬಿ.ಹೆಚ್.ಎಂ ಕೋರ್ಸುಗಳಿಗೆ AICTE ಅನುಮೋದನೆ ಅಗತ್ಯವಾಗಿರುತ್ತದೆ.

5. **ಶಾಶ್ವತ ಸಂಯೋಜನೆ /ಶಾಶ್ವತ ಸಂಯೋಜನಾ ನವೀಕರಣ (ಸ್ನಾತಕೋತ್ತರ ಕೋರ್ಸುಗಳನ್ನು ಹೊರತುಪಡಿಸಿ):**

ಅಸ್ತಿತ್ವದಲ್ಲಿರುವ ಕಾಲೇಜುಗಳು ಅಧಿಸೂಚನೆಯ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಪೂರೈಸತಕ್ಕದ್ದು.

**ಶಾಶ್ವತ ಸಂಯೋಜನೆ (ಎಫ್‌ಪಿಎ)** :ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 62ರ ಅಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ 5 ವರ್ಷಕ್ಕೂ ಕಡಿಮೆ ಇಲ್ಲದ ಅವಧಿಗೆ ನಿರಂತರ ಸಂಯೋಜನಾ ನವೀಕರಣ ಹೊಂದಿದ್ದು, ಸರಾಸರಿಯಲ್ಲಿ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವಂತಹ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜುಗಳು ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯುಬಿವಿ 2007 ದಿನಾಂಕ 09.04.2007 ರಲ್ಲಿ ನಿಗಧಿಪಡಿಸಿರುವಂತೆ, ಕಾಲೇಜುಗಳು ನ್ಯಾಕ್ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯನ್ನು ಹೊಂದಿರುವುದು ಅತ್ಯವಶ್ಯಕವಾಗಿರುತ್ತದೆ.

**ಶಾಶ್ವತ ಸಂಯೋಜನೆ ನವೀಕರಣ (ಆರ್.ಪಿ.ಎ)** : ಶಾಶ್ವತ ಸಂಯೋಜನಾ ಅವಧಿಯು ಪೂರ್ಣಗೊಂಡಿರುವಂತಹ ಕಾಲೇಜುಗಳು ಶಾಶ್ವತ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017 ದಿನಾಂಕ 07.07.2017ರಲ್ಲಿ ನ್ಯಾಕ್ ಸಂಸ್ಥೆಯಿಂದ ಎ.ಬಿ.ಸಿ ದರ್ಜೆಗಳನ್ನು ಪಡೆದಿರುವಂತಹ ಕಾಲೇಜುಗಳಿಗೆ

ಅನುಕ್ರಮವಾಗಿ 5ವರ್ಷ, 4ವರ್ಷ ಮತ್ತು 3 ವರ್ಷಗಳ ಅವಧಿಯನ್ನು ಶಾಶ್ವತ ಸಂಯೋಜನೆಗೆ ನಿಗಧಿಪಡಿಸಲಾಗಿದೆ.

**ಶಾಶ್ವತ ಸಂಯೋಜನೆ ವಿಸ್ತರಣೆ** (ಇ.ಪಿ.ಎ): ಈಗಾಗಲೇ ಶಾಶ್ವತ ಸಂಯೋಜನೆಯನ್ನು ಪಡೆದಿರುವಂತಹ ಕಾಲೇಜುಗಳು UUCMS ಆನ್-ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. ಈ ಕಾಲೇಜುಗಳು ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ವಾರ್ಷಿಕ ಶುಲ್ಕವನ್ನು ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ: 05190100016143 IFSC Code: BARB0BANGAL (The 5th Character is Zero )ಆನ್-ಲೈನ್ ಮುಖಾಂತರ ಪಾವತಿಸುವುದು. ಕಾಲೇಜಿನಲ್ಲಿ ಶಾಶ್ವತ ಸಂಯೋಜನೆ ಅಡಿಯಲ್ಲಿ ಅಸ್ತಿತ್ವದಲ್ಲಿರುವ ಕೋರ್ಸ್‌ಗಳ ವಿವರಗಳೊಂದಿಗೆ ವಾರ್ಷಿಕ ಶುಲ್ಕ ಪಾವತಿಸಿರುವ ರಶೀತಿಯನ್ನು ಲಗ್ಗತ್ತಿಸಿ ವಿಶ್ವವಿದ್ಯಾನಿಲಯಕ್ಕೆ ನೇರವಾಗಿ ಸಲ್ಲಿಸಲು ಸೂಚಿಸಿದೆ.

6. **ಸ್ಥಳಾಂತರ /ಹೆಸರು ಬದಲಾವಣೆ/ಆಡಳಿತದ ಬದಲಾವಣೆ ಇತ್ಯಾದಿ:**
ಕಾಲೇಜುಗಳು ಸ್ಥಳಾಂತರ /ಹೆಸರು ಬದಲಾವಣೆ/ಆಡಳಿತದ ಬದಲಾವಣೆ ಇತ್ಯಾದಿಗಳನ್ನು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 59 (5)ರ ಅಡಿಯಲ್ಲಿ ಪರಿಷ್ಕರಿಸಲಾಗುವುದು. ಅಂತಹ ಕಾಲೇಜುಗಳು ಅ) ಆಡಳಿತ ಮಂಡಳಿಯ /ಟ್ರಸ್ಟ್‌ನ ನಿರ್ಣಯ, ಆ) ಕಟ್ಟಡದ ನಕ್ಷೆ, ಕ್ರಯಯೋಗ್ಯದ ಪತ್ರ ಇ) ಇತರೆ ಇಲಾಖೆಗಳಿಂದ ನಿರಾಪೇಕ್ಷಣಾ ಪತ್ರ ಇತ್ಯಾದಿ ಅವಶ್ಯಕ ದಾಖಲೆಗಳೊಂದಿಗೆ ನಿಗಧಿತ ಶುಲ್ಕ ಪಾವತಿಸಿ ಸಲ್ಲಿಸತಕ್ಕದ್ದು.

ಕಾಲೇಜು ಸ್ಥಳಾಂತರ ಕೋರಿ ಅರ್ಜಿ ಸಲ್ಲಿಸುವ ಕಾಲೇಜುಗಳು ಅಧಿಸೂಚನೆ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡವನ್ನು ಪೂರೈಸತಕ್ಕದ್ದು. ಮತ್ತು NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ Compliance Certificate ಗಳನ್ನು ಪಡೆದು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**ಸೂಚನೆ** :ಕಾಲೇಜು ಆಡಳಿತ ಮಂಡಳಿಗಳು ಸ್ಥಳಾಂತರ ಹೆಸರು ಬದಲಾವಣೆ/ ಆಡಳಿತದ ಬದಲಾವಣೆ ಇತ್ಯಾದಿಗಳ ಬಗ್ಗೆ ಸರ್ಕಾರದಿಂದ ಅನುಮೋದನೆ ಅವಶ್ಯಕವಾಗಿದೆ.

7. **ಕೋರ್ಸ್‌ಗಳ ಹಾಗೂ ಕಾಲೇಜುಗಳ ಸಂಯೋಜನಾ ರದ್ದತಿ:**
ಕಾಲೇಜುಗಳು/ ಕೋರ್ಸ್‌ಗಳ ತಾತ್ಕಾಲಿಕ ಸಂಯೋಜನೆಯನ್ನು ಮುಂದುವರೆಸುವುದು ಅಗತ್ಯವಲ್ಲವೆಂದು ಇಚ್ಛಿಸಿದಲ್ಲಿ ಅಂತಹ ಕಾಲೇಜುಗಳನ್ನು ಕ್ಲೋಸರ್ ಆಫ್ ಕೋರ್ಸ್ ಅಡಿ ಆನ್-ಲೈನ್ ಅರ್ಜಿಯಲ್ಲಿ ನಮೂದಿಸುವುದು ಕಡ್ಡಾವಾಗಿರುತ್ತದೆ.

8. **ಸಂಯೋಜನಾ / ಅರ್ಜಿಗಳ ಶುಲ್ಕ :**
ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ಬೆ.ನ.ವಿ/ಸೈವಿ/ಸಂ/ಅಧಿಸೂಚನೆ/2024-25 ದಿನಾಂಕ:23.10.2024 ರಲ್ಲಿ ಸಂಯೋಜನಾ ಶುಲ್ಕಗಳನ್ನು ಪ್ರಕಟಿಸಲಾಗಿದ್ದೆ. (ಸರ್ಕಾರದಆದೇಶದ ಸಂಖ್ಯೆ: ಇಡಿ 21 ಯುಬಿವಿ 2004 ಬೆಂಗಳೂರು ದಿನಾಂಕ 15.05.2004ರಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗೆ ಸಂಯೋಜನಾ ಶುಲ್ಕದಲ್ಲಿ ರೇ.50 ರಷ್ಟು ರಿಯಾಯಿತಿ ಇರುತ್ತದೆ.)ಈ ಶುಲ್ಕಗಳನ್ನು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಆನ್-ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಮಯದಲ್ಲಿ ಆನ್-ಲೈನ್ ಮೂಲಕ ಪಾವತಿಸತಕ್ಕದ್ದು. ಕಾಲೇಜುಗಳು ಸಂಯೋಜನಾ ಅರ್ಜಿ ಶುಲ್ಕ ಪಾವತಿಯ ಬದಲಾವಣೆಯನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗೆ ಒಳಪಟ್ಟ ಕಾಲೇಜುಗಳು ಸಂಯೋಜನಾ ಶುಲ್ಕ ವಿನಾಯಿತಿಗೆ ಸಮಾಜ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರದಿಂದ ಪಡೆಯಲಾದ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸತಕ್ಕದ್ದು.

| | |
|---|---|
| ಅರ್ಜಿ ಶುಲ್ಕ ರೂ. -- -- | ರೂ. 5500/- |
| ಯುಯುಸಿಎಂಎಸ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 29.10.2024 |
| ದಂಡ ರಹಿತ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 21.11.2024 |
| ರೂ.12500/- ದಂಡ ಸಹಿತ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 26.11.2024 |
| ಆನ್-ಲೈನ್ ಮುಖಾಂತರ ಸಲ್ಲಿಸಿರುವ ಅರ್ಜಿಯ 6 ಪ್ರತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 29.11.2024 |

ವಿದ್ಯಾರ್ಥಿ ಪ್ರಮಾಣದ ಹೆಚ್ಚಳ/ ಹೊಸ ಕೋರ್ಸು / ಸಂಯೋಜನೆ/ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸುವಂತಹ ಕಾಲೇಜುಗಳು ಸಂಯೋಜನಾ ಶುಲ್ಕ ಪಾವತಿಗೂ ಮುಂಚೆ ಕರಡು ಅರ್ಜಿಗಳನ್ನು ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ಕುಲಸಚಿವರ ಕಛೇರಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿಗೆ ಪರಿಶೀಲನೆಗೆ ಸಲ್ಲಿಸತಕ್ಕದ್ದು. ಹಾಗೂ ಔಪಚಾರಿಕ ಪರಿಶೀಲನೆಯ ನಂತರವಷ್ಟೆ ಆನ್- ಲೈನ್ ಮೂಲಕ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸತಕ್ಕದ್ದು.

**ಸೂಚನೆ:**

1. ಸಂಯೋಜನಾ ಶುಲ್ಕದ ಮರುಪಾವತಿಯು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ/ ಸಂಸ್ಥೆಗಳ ಪರಿಷ್ಕೃತ ಪರಿನಿಯಮಾವಳಿಗಳ ಪ್ರಕಾರ ಮಾಡಲಾಗುವುದು.
2. ಅನರ್ಹ ಕೋರ್ಸುಗಳಿಗೆ ಅರ್ಜಿ ಸಲ್ಲಿಸಿದಲ್ಲಿ, ಕೋರ್ಸುಗಳ ಶುಲ್ಕವನ್ನು ಮರು ಪಾವತಿ/ ಹೊಂದಾವಣೆ ಮಾಡಿಕೊಳ್ಳಲಾಗುವುದಿಲ್ಲ.
3. ಕಾಲೇಜುಗಳು ಸಂಯೋಜನಾ ಅರ್ಜಿಗಳಲ್ಲಿ ತಮ್ಮ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ದಾಖಲೆಯ ಪ್ರತಿಯನ್ನು ಸಲ್ಲಿಸತಕ್ಕದು.
4. ಅಂಚೆ/ಕೊರಿಯರ್ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಹೆಚ್ಚುವರಿ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
6. UGC Regulation -2009 ರ ಅನ್ವಯ UG ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜುಗಳಿಗೆ PG ಕೋರ್ಸುಗಳನ್ನು ಪ್ರಾರಂಭಿಸಲು ಅವಕಾಶವಿದೆ. PG ಕೋರ್ಸುಗಳನ್ನು ಮಾತ್ರ ನಡೆಸುತ್ತಿರುವ ಕಾಲೇಜುಗಳು ಸರ್ಕಾರದ ಪತ್ರ ಇಡಿ 89 UGC 2022 ದಿನಾಂಕ:10.04.2023ರ ರನ್ವಯ 2023-24ನೇ ಸಾಲಿಗೆ UG ಕೋರ್ಸುಗಳಿಗೆ ಕಡ್ಡಾಯವಾಗಿ
7. ನಿಯಮಾನುಸಾರ ಸಂಯೋಜನೆ ಪಡೆದು UG ಕೋರ್ಸುಗಳ ಜೊತೆಗೆ PG ಕೋರ್ಸುಗಳನ್ನು ಮುಂದುವರೆಸಲು ತಿಳಿಸಲಾಗಿದೆ.

ಆದೇಶ ಮೇರೆಗೆ

ಕುಲಸಚಿವರು

ಪ್ರತಿಗಳು:

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ.ಬೆಂಗಳೂರು.
2. ಸಂಯೋಜಕರು, ಯು.ಯು.ಸಿ.ಎಮ್.ಎಸ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಅಂತರ್ಜಾಲದ ಪ್ರತಿ.
4. ಕಛೇರಿ ಪ್ರತಿ/ರಕ್ಷಾ ಕಡತ.